ಪಿಡಬ್ಲ್ಯೂ-1

**<u>ದಿನಾಂಕ 03.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದ.</u>**

ನನ್ನ ತಂದೆ ರಾಜಣ್ಣರವರಿಗೆ ಒಟ್ಟು ನಾಲ್ಕು ಜನ ಮಕ್ಕಳಿದ್ದು ಆ ಪೈಕಿ ಇಬ್ಬರು ಹೆಣ್ಣು ಮಕ್ಕಳು. ನನ್ನ ಸಹೋದರ ಕೀರ್ತಿ ಅಪಘಾತದಲ್ಲಿ ಮೃತಪಟ್ಟಿರುತ್ತಾನೆ. ನನ್ನ ಇನೊಬ್ಬಳು ಸಹೋದರಿ ಸುಸ್ಮಾ ಆಕೆ ಒಬ್ಬನನ್ನು ಪ್ರೀತಿಸಿ ಮದುವೆಯಾದ ಕಾರಣ ಆಕೆಯನ್ನು ಈ ಅರ್ಜಿಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ. ಆಕೆಯ ಗಂಡನ ಹೆಸರು ಲೋಕೆಶ. ಆಕೆ ತುಮಕೂರಿನಲ್ಲಿ ವಾಸ ಮಾಡುತ್ತಿದ್ದು ಆಕೆಯ ಸರಿಯಾದ ವಿಳಾಸ ನನಗೆ ಗೊತ್ತಿಲ್ಲ. ಮೃತ ಕೀರ್ತಿ ದೊಡ್ಡಬಳ್ಳಾಪುರದ ಎಲ್.ಎನ್.ಟಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ. ಆತ ಕೆಲಸಕ್ಕೆ ಸ್ನೇಹಿತರ ಜೊತೆ ಮೋಟಾರು ಸೈಕಲ್ಲಿನಲ್ಲಿ ಅಥವಾ ಬಸ್ಸಿನಲ್ಲಿ ಹೋಗುತ್ತಿದ್ದ. ದಿನಾಂಕ 10.09.2022 ರಂದು ಅಪಘಾತವಾಗಿದ್ದು ಆ ಬಗ್ಗೆ ನನ್ನ ತಾಯಿಯ ತಮ್ಮ ವೆಂಕಟೇಶ್ ರವರು ನನ್ನ ತಮ್ಮನ ಫೋನಿನಿಂದ ನನಗೆ ಕರೆ ಮಾಡಿ ಅದೇ ದಿನ ಸಂಜೆ ಸುಮಾರು 7.30 ಗಂಟೆಗೆ ತಿಳಿಸಿರುತ್ತಾರೆ. ಅಪಘಾತವಾದ ನಂತರ ನಾನು ನನ್ನ ತಮ್ಮನನ್ನು ದೇವನಹಳ್ಳಿಯ ಶಿರಡಿ ಸಾಯಿ ಆಸ್ಪತ್ರೆಯಲ್ಲಿ ರಾತ್ರಿ ಸುಮಾರು 9 ಗಂಟೆಯಲ್ಲಿ ನೋಡಿದೆ. ನನ್ನ ಮಾವ ನನ್ನ ತಮ್ಮನನ್ನು ಆಸ್ಪತ್ರೆಗೆ ಸೇರಿಸಿದ್ದು ನಾನು ಆಸ್ಪತ್ರೆಗೆ ಅವರು ಅಲ್ಲಿಯೇ ಇದ್ದರು.

ನನ್ನ ಮಾವ ಮೇಲೆ ಹೇಳಿದ ಆಸ್ಪತ್ರೆಯಲ್ಲಿ ನನ್ನ ತಮ್ಮನಿಗೆ ಯಾವ ರೀತಿ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ದಿನಾಂಕ 14.09.2022 ರಂದು ನಾನು ಪೊಲೀಸ್ ಠಾಣೆಗೆ ಹೋಗಿ ಈ ಅಪಘಾತಕ್ಕೆ ಸಂಬಂಧಿಸಿದಂತೆ ದೂರನ್ನು ನೀಡಿರುತ್ತೇನೆ. ನನ್ನ ತಮ್ಮ ಐ.ಸಿ.ಯು ನಲ್ಲಿ ದಾಖಲಾಗಿರುವ ಕಾರಣ ಅಪಘಾತವಾದ ದಿನದಂದೇ ದೂರು ಕೊಡಲು ಸಾಧ್ಯವಾಗಲಿಲ್ಲ. ಆಸ್ಪತ್ರೆಯಲ್ಲಿ ನಾನು ನನ್ನ ಮಾವನಿಂದ ಅಪಘಾತ ಹೇಗೆ ಆಯಿತು ಮತ್ತು ಯಾವ ವಾಹನನಿಂದ ಉಂಟಾಯಿತು ಎಂದು ಕೇಳಿ ತಿಳಿದುಕೊಂಡಿರುತ್ತೇನೆ. ನನ್ನ ಮಾವ ಬೈಕನ್ನು ಚಲಾಯಿಸುತ್ತಿದ್ದು ನನ್ನ ತಮ್ಮ ಹಿಂಬದಿ ಸವಾರನಾಗಿದ್ದ. ನನ್ನ ಮಾವ ಅತೀವೇಗವಾಗಿ ಬೈಕು ಚಲಾಯಿಸಿಕೊಂಡು ಹೋಗಿ ರಸ್ತೆಯಲ್ಲಿದ್ದ ಹಳ್ಳಕ್ಕೆ ಬೈಕನ್ನು ಚಲಾಯಿಸಿರುವ ಕಾರಣ ಈ ಅಪಘಾತ ಆಗಿರುತ್ತದೆ. ಕೆಎ-50-ವೈ-0177 ಸಂಖ್ಯೆಯ ಬೈಕು ಯಾರ ಮಾಲೀಕತ್ವದ ಬೈಕು ಎಂದು ನನಗೆ ಗೊತ್ತಿಲ್ಲ, ಆದರೆ ಅದನ್ನು ನನ್ನ ಮಾವ ಖರೀದಿಸಿದ್ದಾರೆ ಎಂದು ಹೇಳಿರುತ್ತಾರೆ.

ಪಿಡಬ್ಲ್ಯೂ-1

ನನ್ನ ತಮ್ಮನಿಗೆ ಆಗಿರುವ ಗಾಯಗಳ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನ ಸಾವಿಗೆ ಸಂಬಂಧಿಸಿದಂತೆ ನಿಪಿ 5 ಅನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಶಿರಡಿ ಸಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದ ಕಾರಣ ನಾವು ನನ್ನ ತಮ್ಮನನ್ನು ದೊಡ್ಡಬಳ್ಳಾಪುರದ ವಿ.ಕೇರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿಂದ ಯಲಹಂಕದ ನವಚೇತನ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಈ ಮೇಲೆ ಹೇಳಿದ ಆಸ್ಪತ್ರೆಗಳಲ್ಲಿ ನೀಡಿದ ಡಿಸ್ಚಾರ್ಜ್ ಸಮರಿಗಳನ್ನು ಹಾಜರಪಡಿಸಿದ್ದೇನೆ. ಸಾಕ್ಷಿಯು ಸ್ವತಃ ನನ್ನ ಬಳಿ ಇದ್ದ ಎಲ್ಲಾ ದಾಖಲಾತಿಗಳನ್ನು ಈಗಾಗಲೇ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದು ತಿಳಿಸಿರುತ್ತಾರೆ. ನಾನು ಮೇಲೆ ಹೇಳಿದ ಮೂರು ಆಸ್ಪತ್ರೆಗಲ್ಲಿ ನೀಡಿದ ಡಿಸ್ಚಾರ್ಜ್ ಸಮರಿಗಳನ್ನು ಹಾಜರಪಡಿಸಿಲ್ಲ ಎಂದರೆ ಗೊತ್ತಿಲ್ಲ. ಮೇಲೆ ಹೇಳಿದ ಮೂರೂ ಆಸ್ಪತ್ರೆಗಳಲ್ಲಿ ನೀಡಿದ ಡಿಸ್ಚಾರ್ಜ್ ಸಮರಿಗಳನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಬಳಿ ಇದ್ದ ಎಲ್ಲಾ ದಾಖಲಾತಿಗಳನ್ನು ಈಗಾಗಲೇ ಹಾಜರುಪಡಿಸಿ ಆಗಿದೆ ಎಂದು ತಿಳಿಸಿರುತ್ತಾರೆ.

ಶಿರಡಿ ಸಾಯಿ ಆಸ್ಪತ್ರೆಯಲ್ಲಿ ನನ್ನ ತಮ್ಮ ಒಂದು ದಿನ ದಾಖಲಾಗಿದ್ದ. ವಿ. ಕೇರ್ ಆಸ್ಪತ್ರೆಯಲ್ಲಿ ನನ್ನ ತಮ್ಮ ಒಂದು ದಿನ ದಾಖಲಾಗಿದ್ದ. ನವಚೇತನ ಆಸ್ಪತ್ರೆಯಲ್ಲಿ ನನ್ನ ತಮ್ಮ ಸುಮಾರು 8 ದಿನ ದಾಖಲಾಗಿದ್ದ. ಎಲ್ಲಾ ದಾಖಲಾತಿಗಳನ್ನು ಈಗಾಗಲೇ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ತಮ್ಮ ನವಚೇತನ ಆಸ್ಪತ್ರೆಯಲ್ಲಿ ದಿನಾಂಕ 18.09.2022 ರಂದು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾನೆ. ನನ್ನ ತಮ್ಮ ಬೈಕು ಚಲಾಯಿಸಿಕೊಂಡು ಬಂದು ಆಯ ತಪ್ಪಿ ಬಿದ್ದು ಸ್ವತಃ ಅಘಾತವನ್ನುಂಟು ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಮೂರೂ ಆಸ್ಪತ್ರೆಗಳಲ್ಲಿ ನೀಡಿದ ಡಿಸ್ಚಾರ್ಜ್ ಸಮರಿಗಳಲ್ಲಿ ನನ್ನ ತಮ್ಮ ಸ್ವತಃ ಆಯ ತಪ್ಪಿ ಬಿದ್ದು ಅಪಘಾತವನ್ನುಂಟು ಮಾಡಿಕೊಂಡಿರುವ ಬಗ್ಗೆ ನಮೂದು ಇದ್ದ ಕಾರಣ ಆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ತಮ್ಮ ಹೆಲ್ಮೆಟ್ ಧರಿಸದೇ ಬೈಕನ್ನು ಚಲಾಯಿಸಿರುವ ಕಾರಣ ಆತನ ತಲೆಗೆ ಏಟು ಬಿದ್ದಿರುತ್ತದೆ ಎಂದರೆ ಸರಿಯಲ್ಲ. ನನ್ನ ತಮ್ಮ ಸ್ವತಃ ಅಪಘಾತ ಉಂಟು ಮಾಡಿಕೊಂಡಿರುವ ಕಾರಣ ನನ್ನ ಮಾವನ ಜೊತೆ ಶಮೀಲಾಗಿ 4 ದಿನಗಳ ಕಾಲ ತಡವಾಗಿ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ಪಿಡಬ್ಲ್ಯೂ-1

ನಾನು ದೊಡ್ಡಬಳ್ಳಾಪುರದ ಫಾರ್ಮಾ ಆಗ್ರೋ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ. ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ಸದರಿ ಸಂಸ್ಥೆಯಲ್ಲಿ ನಾನುಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದೆ. ಆ ಸಂಸ್ಥೆಯಿಂದ ನನ್ನನ್ನು ತೆಗೆದಿರುವ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ನನ್ನ ತಮ್ಮ ಮೃತ ಕೀರ್ತಿ ದೊಡ್ಡಬಳ್ಳಾಪುರದ ಎಲ್.ಎನ್.ಟಿ ಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಪೇ ಸ್ಲಿಪ್ ಅನ್ನು ನಮ್ಮ ವಕೀಲರಿಗೆ ನೀಡಿದ್ದೇನೆ. ನನ್ನ ತಮ್ಮ ಯಾವುದೇ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಮತ್ತು ಅವನಿಗೆ ಯಾವುದೇ ವರಮಾನ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಮತ್ತು ನಾನು ವ್ಯವಸಾಯ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಮೇಲೆ ಹೇಳಿದ ಬೈಕನ್ನು ಸ್ವತಃ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಆತ ಹಿಂಬದಿ ಸವಾರನಾಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ 15 ಮತ್ತು 17 ರಲ್ಲಿನ ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಮೃತಪಟ್ಟನಂತರ ಅವನ ಕಣ್ಣನ್ನು ಧಾನ ಮಾಡಿರುತ್ತೇವೆ. ಆ ಬಗ್ಗೆ ದಿನಪತ್ರಿಕೆಯಲ್ಲಿ ಬಂದಿರುತ್ತದೆ.

2 ನೇ ಎದುರುದಾರರ ಪರ ಮಾನ್ಯ ವಕೀಲರು ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದ್ದೆ).

(ಓ.ಹೇ.ಕೇ.ಸ.ಇ.)

1 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಸದಸ್ಯರು ಮೋ.ವಾ. ನ್ಯಾಯಮಂಡಳಿ,
ಲಘು ವ್ಯವಹಾರಗಳ ನ್ಯಾಯಾಲಯ